ಕರ್ನಾಟಕ ವಿಧಾನಸಭೆ

KARNATAKA LEGISLATIVE ASSEMBLY

Tuesday, the 4th April, 1978. Chaitra 14, 1900 S.E.

The House met in the Assembly Chamber, Vidhana Soudha, at Nine of the Clock.

[MR. SPEAKER (SRI P. VENKATARAMANA) in the Chair.]

Petition re : Payment of Salaries to Patels and talaries of Puttur Taluk Presentation

ಶ್ರೀ ಕೆ. ರಾಮ ಭಟ್.—ಮಾನ್ಯ ಅಧ್ಯಕ್ಷರೇ, ಪುತ್ತೂರು ತಾಲ್ಲೂಕಿನ ಪಟೇಲ್‌ರುಗಳು ಹಾಗೂ ತಲಾರಿಗಳಿಗೆ ಸಂಬಳ ಕೊಡುವ ಬಗ್ಗೆ ಶ್ರೀ ಬಿ. ಮುದ್ದಪ್ಪಶೆಟ್ಟಿ ಹಾಗೂ ಇತರರೂ ಸಹಿ ಮಾಡಿರುವ ಅರ್ಜಿಯನ್ನು ಈ ಸದನಕ್ಕೆ ಒಪ್ಪಿಸುತ್ತಿದ್ದೇನೆ.

MR. SPEAKER.—The Petition is presented.

CALLING ATTENTION TO MATTERS OF URGENT PUBLIC IMPORTANCE

(i) re : Scarcity of drinking water in Mysore City

SRI H. GANGADHARAN (Krishnaraja).—I call the attention of the Minister for Municipal Administration to the hardship caused to the people of Mysore City due to scarcity of drinking water.

SRI H. C. SRIKANTAIAH (Minister for Municipal Administration) Sir, I wish to make the following statement:—

Mysore City has it water supply from river Cauvery of R.B.L.L. channel from K. R. Sagar. The head works is situated at Hongally. The capacity of the treatment plant and transmission main is 7 MGD In addition, the old system from Belagola is also supplying 3.5 MGD. Besides there are 27 borewells sunk and harnessed which are yielding 1.2 MGD. The present population of the city is about 4.2 lakhs and the total requirement is 16.8 MGD at 40 GPCD, against which 11.7 MGD is being supplied which works out to about 28 GPCD,

In the following areas there is inadequate supply of water on account of the location of these areas along ridges or at the tail end of the distribution system-

1. Saint Mary's Road Cross, in N. R. Mohalla.

2. Medar's block in Vidyaranyapuram:
3. Jyothinagar police quarters and Giriyaboyi Palya.
4. 1st, 2nd and 3rd crosses of Paramahamsa road, Yadavagiri.

However, efforts are being made to supply water for atleast two hours in these areas, and adequate supplies can be assured after completion of III stage improvement works now under progress. In the meanwhile, action has already been taken to supplement the supplies to these localities by providing borewells, improving the distribution net work and by providing booster pumps.

The III stage improvements to the water supply system of Mysore City sanctioned at a total cost of Rs. 345.00 lakhs under the L.I,C. Loan assistance scheme during 1971 has been taken up and the works are in progress. It is designed to augment an additional supply of 10 MGD. It is expected that this scheme would be completed by the end of this year after which adequate supply of water to the city will be assured.

ಶ್ರೀ ಹೆಚ್. ಗಂಗಾಧರನ್ –ಕೆಲವು ಕ್ಷೇತ್ರಗಳಲ್ಲಿ ಮಾತ್ರ ನೀರಿನ ತೊಂದರೆಯಾಗಿದೆ ಎಂದು ಹೇಳುತ್ತೇನೆ. ನಗರದ ಮುಖ್ಯ ಕ್ಷೇತ್ರಗಳಾಗಿರತಕ್ಕ ಬಂಡೀಕೆರೆ, ಬಸವೇಶ್ವರ ರಸ್ತೆ ಮತ್ತಿತರ ಕಡೆಗಳಲ್ಲಿ ನೀರಿನ ಅಭಾವ ಇದೆ. ದಿನದಲ್ಲಿ ಅರ್ಧ ಗಂಟೆ ಕೂಡ ನೀರು ಸರಿಯಾಗಿ ಬರುವುದಿಲ್ಲ. ಸರಬರಾಜು ಮಾಡುವಲ್ಲಿ ಏನಾದರೂ ತೊಂದರೆ ಮಾಡುತ್ತಾರೋ ಎಂದು ಏನು ಗೊತ್ತಾಗಿಲ್ಲ. ಆ ಬಗ್ಗೆ ವಿವರಣೆ ಏನಾದರೂ ಸರ್ಕಾರಕ್ಕೆ ಬಂದಿದೆಯೆ? ನ್ಯೂ ಇಟ್ಟಿಗೆ ಎಂಬ ಸ್ಥಳದಲ್ಲಿ ಪೈಪ್‌ಲೈನ್ಸ್ ಕೊಟ್ಟಿಲ್ಲ. ಆದಕ್ಕೆ ಹೌಸಿಂಗ್ ಬೋರ್ಡಿನವರು ಸ್ಯಾಂಕ್ಷನ್ ಕೊಡಬೇಕಂತೆ, ಅವರೂ ಕೂಡ ಏನ್ನು ಮಾಡಿಲ್ಲ. ೨೦೦ ಮನೆಗಳಿರುವ ಜಾಗಕ್ಕೆ ಕೇವಲ ಎರಡು ಬೀದಿ ನಲ್ಲಿಗಳನ್ನು ಹಾಕಿದ್ದಾರೆ. ಅದರಲ್ಲಿಯೇ ಕಾರ್ಮಿಕರೂ ಕೂಡ ನೀರು ತೆಗೆದು ಕೊಳ್ಳಬೇಕಾಗಿದೆ. ರೈಲ್ವೆ ಕ್ವಾರ್ಟರ್ಸ್‌ನಲ್ಲೂ ಕೂಡ ನೀರಿನ ಅಭಾವ ಇದೆ. ಈ ಬಗ್ಗೆ ಕೂಡಲೇ ವ್ಯವಸ್ಥೆ ಮಾಡಿಸುತ್ತೀರಾ?

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ಮಾನ್ಯ ಸದಸ್ಯರು ಆ ಎಲ್ಲ ವಿವರಗಳನ್ನು ಕೊಟ್ಟರೆ ಪರಿಶೀಲನೆ ಮಾಡಿಸುತ್ತೇನೆ. ಮೈಸೂರಿನಲ್ಲೇನು ಬಳ್ಳಾರಿ, ಗುಲ್ಬರ್ಗ, ರಾಯಚೂರಿನಲ್ಲಿರುವ ಹಾಗೆ ನೀರಿನ ಅಭಾವ ಇಲ್ಲ, In Mysore City, they are getting 28 gallons i.e., per capita per,dayand the third stage is already under progress and it will be completed by the end of this year.ಆದ್ದರಿಂದ ಅವರು ಕೆಲವು ಯಾವುದೋ ಕಾರಣ ಗಳಿಂದಹೇಳಿದ್ದಾರೆ. ಪಂಪ್ ಸರಿಯಾಗಿ ವರ್ಕ್ ಮಾಡದಿದ್ದರೆ. ಅದನ್ನು ಪರಿಶೀಲನೆ ಮಾಡಿಸುತ್ತೇನೆ. ಅದಕ್ಕೆಲ್ಲ ಅವರು ವಿವರ ಕೊಡಬೇಕು.

ಶ್ರೀ ಹೆಚ್. ಗಂಗಾಧರನ್,—ಮೊನ್ನೆ ಗ್ರಹಣದ ದಿನ ನೀರು ಬಾರದೆ ಆಲ್ಲಿನ ಜನರೆಲ್ಲ ಸ್ನಾನ ಮಾಡುವುದಕ್ಕೆ ಶ್ರೀರಂಗಪಣ್ಣಕ್ಕೆ ಹೋಗಿದ್ದರು. ಕೊನೇ ಪಕ್ಷ ಉಗಾದಿ ಸ್ನಾನವನ್ನಾದರೂ ತಮ್ಮ ಸ್ಥಳ ದಲ್ಲಿಯೇ ಮಾಡುವುದಕ್ಕೆ ಅವಕಾಶ ಮಾಡಿಕೊಡಿ.

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ಮಾನ್ಯ ಸದಸ್ಯರು ಹೇಳುವಷ್ಟು ರೀತಿಯ ಕಷ್ಟಪರಿಸ್ಥಿತಿ ಏನೂ ಅಲ್ಲಿ ಇಲ್ಲ, ಕೆಲವು ಕಡೆ ಡಿಸ್ಟ್ರಿಬ್ಯೂಷನ್ ಸಿಸ್ಟಂನಲ್ಲಿ ತೊಂದರೆ ಇದ್ದರೆ ಅದನ್ನು ನಾನು ಪರಿಶೀಲಿಸಿ ಮಾಡಿಸುತ್ತೇನೆ.

MR. SPEAKER.—He has invited the Hon. Member to discuss with him if there is any specific matter